ಪ್ರಧಾನ ವ್ಯವಹಾರಿಕ ನ್ಯಾಯಾಧೀಶರು ಮತ್ತು ಪ್ರ ದ ನ್ಯಾದಂ. ರವರ ನ್ಯಾಯಾಲಯ, ಪಿರಿಯಾಪಟ್ಟಣ

ಸಿಸಿ ಸಂಃ **154/2024**

| | | |
|---|---|---|
| ಸಾಕ್ಷಿಯ ಹೆಸರುಃ | ಕೆ.ವಿ.ಶಿವರಾಜು | ಫ್ರಾಸಾಃಃ 1 |
| ತಂದೆ ಹೆಸರುಃ | ಕೆ.ಹೆಚ್.ವೆಂಕಟೇಗೌಡ | ಚಾಸಾಃಃ 6 |
| ವಯಸ್ಸುಃ | 55 ವರ್ಷ | ಪ್ರಮಾಣೀಕರಿಸಿದ ದಿಃ 03.12.2025 |
| ಉದ್ಯೋಗಃ | ವ್ಯವಸಾಯ | |
| ವಾಸಸ್ಥಳಃ | ಕಗ್ಗುಂಡಿ ಗ್ರಾಮ, ಪಿರಿಯಾಪಟ್ಟಣ ತಾಃ | |

ಮುಖ್ಯ ವಿಚಾರಣೆಃ ಸಸಅ ರಿಂದಃ

1. ಸಾಕ್ಷಿಯು ಮಹಜರ್ ನಲ್ಲಿರುವ ತಮ್ಮ ಸಹಿಯನ್ನು ನೋಡಿ ಗುರುಸಿರುತ್ತಾರೆ. ಮಹಜರನ್ನು ನಿಪಿ - 1 ಎಂದು, ಸಾಕ್ಷಿಯ ಸಹಿಯನ್ನು ನಿಪಿ - 1(ಎ) ಎಂದು ಗುರುತಿಲಾಯಿತು. ನಿಪಿ - 1 ಕ್ಕೆ ನಾನು ಈಗ್ಗೆ 1-2 ವರ್ಷದ ಹಿಂದೆ ಪೊಲೀಸ್ ಠಾಣೆಯಲ್ಲಿ ಪೊಲೀಸರ ಕೋರಿಕೆಯ ಮೇರೆಗೆ ಸಹಿ ಮಾಡಿರುತ್ತೇನೆ. ಪೊಲೀಸರು ನನ್ನ ಸಮಕ್ಷಮ ಯಾವುದೇ ಮಹಜರ್ ಮಾಡಿಲ್ಲ ಮತ್ತು ಯಾವುದೇ ವಾಹನವನ್ನು ಅಮಾನತುಪಡಿಸಿಕೊಂಡಿರುವುದಿಲ್ಲ. ನಿಪಿ - 1 ರಲ್ಲಿ ಏನು ಬರೆದಿದೆ ಎಂದು ಗೊತ್ತಿಲ್ಲ.

**(ಈ ಸಮಯದಲ್ಲಿ ಸಹಾಯ ಸರ್ಕಾರಿ ಅಭಿಯೋಜಕರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರುತ್ತಾರೆ. ಅನುಮತಿ ನೀಡಲಾಯಿತು.)**

ಪಾಟೀ ಸವಾಲುಃ ಸಸಅ ರವರಿಂದಃ

1. ದಿಃ 16.10.2023 ರಂದು ಪಿರಿಯಾಪಟ್ಟಣ ಪೊಲೀಸರು ನನ್ನನ್ನು ಹಾಗೂ ಚಾಸಾ - 7 ರವರನ್ನು ಠಾಣೆಗೆ ಬರಮಾಡಿಕೊಂಡು ಈ ಪ್ರಕರಣದ ವಿಚಾರಗಳನ್ನು ತಿಳಿಸಿ ನಮಗೆ ಪಂಚರಾಗಲು ಕೋರಿಕೊಂಡರು ಎಂದರೆ ಸರಿಯಲ್ಲ. ಅದರಂತೆ ನಾವು ಒಪ್ಪಿಕೊಂಡ ಮೇರೆಗೆ ನಮ್ಮಗಳ ಸಮಕ್ಷಮ ಈ ಪ್ರಕರಣದ ಆರೋಪಿ ಹಾಜರುಪಡಿಸಿದ ಕೆಎ.09.ಹೆಚ್.ಜಿ.3654 ರ ಹೊಂಡಾ ಶೈನ್ ಬೈಕನ್ನು ಅಮಾನತುಪಡಿಸಿಕೊಂಡು ನಿಪಿ - 1 ರಂತೆ ಬೆಳಿಗ್ಗೆ 10-30 ರಿಂದ 11-15 ಗಂಟೆಯವರೆಗೆ ಮಹಜರ್ ಕ್ರಮ ಜರುಗಿಸಿರುತ್ತಾರೆ. ನಿಪಿ - 1 ಕ್ಕೆ ನಾನು ಸ್ಥಳದಲ್ಲಿ ಸಹಿ ಮಾಡಿರುತ್ತೇನೆ ಎಂದರೆ ಸರಿಯಲ್ಲ.

2. ಆರೋಪಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಪಾಟೀ ಸವಾಲುಃ ಆರೋಪಿ ಪರ ವಕೀಲರಿಂದಃ</u>

ಇಲ್ಲ ಎಂದು ನುಡಿಯುತ್ತಾರೆ.

<u>(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯು ಹೇಳಿದಂತೆ ನನ್ನ ಉಕ್ತಲೇಖದಂತೆ ಬೆರಳಚ್ಚು ಮಾಡಲಾಯಿತು.)</u>

ಓ ಹೇ ಕೇ ಸ ಇ ಒ

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾದಂ.
ಪಿರಿಯಾಪಟ್ಟಣ